**<u>ಪ್ರಧನಾ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ಇವರ ನ್ಯಾಯಾಲಯ, ಮುಧೋಳ</u>**

**<u>ಸಾಕ್ಷಿಗೆ ಇಂದು ದಿನಾಂಕ 30.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ USZ ವಕೀಲರಿಂದ</u>**

ನಾನು B.Com LLB ಪದವಿಧರನಾಗಿರುವೆನು. ನಾನು ಮ್ಯಾನೇಜರ್ ಅಂತ ಕಾನೂನು ಕೋಶದಲ್ಲಿ ಕಳೆದ 3 ವರ್ಷದಿಂದ ಸೇವೆ ಸಲ್ಲಿಸುತ್ತಿರುವೆನು. ಕಳೆದ 15 ವರ್ಷಗಳಿಂದ ಈ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವೆನು. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯಲ್ಲಿ ನನ್ನ ಹುದ್ದೆ ಅಕೌಂಟ್ ಆಫಿಸರ್ ಅಂತ ಕಾಣಿಸಿದ್ದೇವೆ ಎಂದರೆ ಅದು ನಜರ್ ಚೂಪಿನಿಂದ ಟೈಪ ಆಗಿರುವುದು. ನಮ್ಮ ಕಂಪನಿಯಲ್ಲಿ ಬೇರೆ ಬೇರೆ ವಿಭಾಗಗಳು ಇರುವವು ಎಂದರೆ ಸರಿ. ಕೃಷಿಯ ವಿಭಾಗ, ಲೆಕ್ಕ ಪತ್ರದ ವಿಭಾಗ ಈ ರೀತಿಯ ಬೇರೆ ಬೇರೆ ವಿಭಾಗಗಳು ಇರುವವು ಎಂದರೆ ಸರಿ. ನನಗೆ ನಮ್ಮ ಕಂಪನಿಯಲ್ಲಿ ಕಾನೂನು ಕೋಶದ ವಿಭಾಗವನ್ನು ಹೊರತು ಪಡಿಸಿ ಬೇರೆ ವಿಭಾಗದ ಕೆಲಸ ನನಗೆ ಸಂಬಂಧ ಬರುವುದಿಲ್ಲ ಎಂದರೆ ಸರಿಯಲ್ಲ. ಲೆಕ್ಕ ಪತ್ರದ ವಿಭಾಗ ಸಹ ಸಂಬಂಧ ಬರುವುದು. ಇದಕ್ಕೆ ಸಂಬಂಧಪಟ್ಟಂತೆ ದಾಖಲೆಯನ್ನು ನಾನು ಹಾಜರು ಪಡಿಸಿರುವುದಿಲ್ಲ. ಈ ದೂರುದಾರ ಸಂಸ್ಥೆಯು ಕಂಪನಿ ಕಾನೂನಿನ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುವುದು ಎಂದರೆ ಸರಿ. ಕಂಪನಿ ಕಾನೂನಿನ ಪ್ರಕಾರ ನಿರ್ದೇಶಕ ಮಂಡಳಿಯವರು ಠರಾವುಗಳನ್ನು ಪಾಸ್ ಮಾಡುತ್ತಾರೆ ಎಂದರೆ ಸರಿ.

2. ನಿಪಿ 2 ರ ಪ್ರಕಾರ ಈ ಪ್ರಕರಣ ದಾಖಲು ಮಾಡಲು ಮತ್ತು ಸಾಕ್ಷಿ ನುಡಿಯಲು ಅಧಿಕಾರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ರ ದಾಖಲಾತಿಯು ಟ್ರೂ ಕಾಪಿಯಾಗಿರುವುದು ಎಂದರೆ ಸರಿ. ಆ ದಾಖಲೆಯ ಪ್ರಕಾರ ನನಗೆ ಈ ಪ್ರಕರಣ ದಾಖಲು ಮಾಡಲು ಅಧಿಕಾರ ನೀಡಿರುವರು ಎಂದರೆ ಸರಿಯಲ್ಲ. ಆ ದಾಖಲೆಯ ಪ್ರಕಾರ ನನಗೆ ಸಾಕ್ಷಿ ನುಡಿಯಲು ಅಧಿಕಾರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ದೂರನ್ನು ನಾನು ಕಂಪನಿಯ ಪರವಾಗಿ ದಾಖಲು ಮಾಡಿರುವೆನು. ನಾನು ಈ ದೂರನ್ನು ಕಂಪನಿಯ ಪರವಾಗಿ ಮ್ಯಾನೇಜಿಂಗ್ ಡೈರೆಕ್ಟರ್ ರವರು ಅಧಿಕಾರ ನೀಡಿರುವುದರಿಂದ ಅವರ ಹೆಸರಿನಲ್ಲಿ ದಾಖಲು ಮಾಡಿರುವೆನು. ನಿಪಿ 2 ರ

ದಾಖಲಾತಿಯ ಮೂಲ ಪ್ರತಿ ಕಂಪನಿಯ ಆಡಳಿತ ಮಂಡಳಿಯವರು ನೀಡಿರುವಂತಹ ದಾಖಲಾತಿಯಾಗಿರುವುದು. ಕಂಪನಿಯ ಮಿನಿಟ್ಸ ಪುಸ್ತಕವಿರುವುದು ಎಂದರೆ ಸರಿ. ಕಂಪನಿಯು ಪ್ರತಿ ವರ್ಷ ಲೆಕ್ಕಪರಿಶೋಧನೆಗೆ ಒಳಪಡುತ್ತದೆ ಎಂದರೆ ಸರಿ. ಪ್ರತಿ ವರ್ಷ ಅದರ ಬಗ್ಗೆ ಕಂಪನಿ ರಿಜಿಸ್ಟಾರ್ ಗೆ ಮಾಹಿತಿ ನೀಡುತ್ತೇವೆ ಎಂದರೆ ಸರಿ. ನಿಪಿ 2 ರ ದಾಖಲಾತಿಯು ಮಿನಿಟ್ಸ ಪುಸ್ತಕದ ನಕಲು ಪ್ರತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಖೊಟ್ಟಿಯಾದ Resolution Duplicate ದಾಖಲಾತಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಈ ದಾಖಲೆಯ ಪ್ರಕಾರ ನನಗೆ ಕಂಪನಿಯವರು ಯಾವುದೇ ಕ್ರಿಮಿನಲ್ ಪ್ರಕರಣ ದಾಖಲು ಮಾಡಲು ಅಧಿಕಾರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ರ ದಾಖಲೆಯಲ್ಲಿ ನಿರ್ದಿಷ್ಟವಾಗಿ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪ್ರಕರಣ ದಾಖಲು ಮಾಡಲು ಅಧಿಕಾರ ನೀಡಿರುವುದಿಲ್ಲ ಎಂದರೆ ಸರಿ, ಆದರೆ ಕಂಪನಿಯ ಪರವಾಗಿ ಪ್ರಕರಣ ದಾಖಲು ಮಾಡಲು ಸಾಮಾನ್ಯ ಅಧಿಕಾರ ನೀಡಿರುವರು. ನನಗೆ ಈ ಪ್ರಕರಣದ ಆರೋಪಿಯ ವಿರುದ್ಧ ದೂರು ದಾಖಲು ಮಾಡಲು ಠರಾವು ಪಾಸ್ ಮಾಡಿ ಕೊಟ್ಟಿರದೇ ಇದ್ದರೂ ಸಹಿತ ಆತನ ವಿರುದ್ಧ ಸುಳ್ಳು ದೂರು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನನಗೆ ದೂರು ದಾಖಲು ಮಾಡಲು ಮತ್ತು ಸಾಕ್ಷಿ ನುಡಿಯಲು ಅಧಿಕಾರವಿರುವುದಿಲ್ಲ ಎಂದರೆ ಸರಿಯಲ್ಲ.

3. ನಿಪಿ 3 ರ ದಾಖಲಾತಿಯು ದೂರುದಾರ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು ಅಧಿಕಾರ ನೀಡಿರುವ ದಾಖಲಾತಿಯಾಗಿರುವುದು. ಕಂಪನಿ ಆಡಳಿತ ಮಂಡಳಿಯವರು ನನಗೆ ಅಧಿಕಾರ ಪತ್ರ ನೀಡುವಂತೆ ಕಂಪನಿಯ ವ್ಯವಸ್ಥಾಪಕ ನಿರ್ದೇಕರಿಗೆ ಠರಾವು ಪಾಸ್ ಮಾಡಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ರ ದಾಖಲೆಯಲ್ಲಿ ದೂರುದಾರ ಮ್ಯಾನೇಜಿಂಗ್ ಡೈರಿಕ್ಟರ್ ರವರು ನನಗೆ ಒಟ್ಟು ಮುಕ್ತಿಯಾರ ನಾಮಪತ್ರ ಬರೆದುಕೊಡಲು ಠರಾವು ಪಾಸ್ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಕಂಪನಿಯ ನಿಯಮದ ಪ್ರಕಾರ ಆ ರೀತಿಯಾಗಿ ಪ್ರತ್ಯೇಕವಾಗಿ ಠರಾವು ಪಾಸ್ ಮಾಡಲು ಅವಶ್ಯಕತೆ ಇರುವುದಿಲ್ಲ ಎಂದು ಉತ್ತರಿಸುವರು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣ ದಾಖಲು ಮಾಡಲು ಯಾವುದೇ ಅಧಿಕಾರವಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿನ ಪವರ್ ಆಫ್ ಆಟಾರ್ನಿಗೂ ಮತ್ತು ದೂರುದಾರ ಕಂಪನಿಗೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ನಮೂದು ಮಾಡಿರುವ ಸಂಗತಿಗಳನ್ನೇ ನಿಪಿ 1 ರಲ್ಲಿ ನಮೂದು ಮಾಡಿರುವರು ಎಂದರೆ ಸರಿ. ನಿಪಿ 1 ರ ದಾಖಲೆಯ ಪ್ರಕಾರ ಮ್ಯಾನೇಜಿಂಗ್

ಡೈರೆಕ್ಟರ್ ರವರು ತಮ್ಮ ವೈಯಕ್ತಿಕನಾತೆಯಿಂದ ನನಗೆ ಜಿ.ಪಿ.ಎ ನೀಡಿರುವರು ಎಂದರೆ ಸರಿಯಲ್ಲ. ಅವರಿಗೆ ಈ ಜಿ.ಪಿ.ಎ ನೀಡಲು ಅಧಿಕಾರವಿರುವುದಿಲ್ಲ, ಅದೇ ರೀತಿ ಆ ಜಿ.ಪಿ.ಎ ಪ್ರಕಾರ ನಡೆದುಕೊಳ್ಳಲು ನನಗೂ ಸಹ ಅಧಿಕಾರ ವಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ಕಂಪನಿಯ ಯಾವುದೇ ಡೈರೆಕ್ಟರ್ ಮ್ಯಾನೇಜಿಂಗ್ ಡೈರೆಕ್ಟರ್ ಗೆ ಜಿ.ಪಿ.ಎ ಬರೆದುಕೊಡುವ ಉಲ್ಲೇಖ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ರ ಪ್ರಕಾರ ಈ ಕ್ರಿಮಿನಲ್ ಪ್ರಕರಣ ದಾಖಲು ಮಾಡಲು ಮತ್ತು ಸಾಕ್ಷಿ ನುಡಿಯಲು ನನಗೆ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

4. ಈ ದುಾರು ದಾಖಲು ಮಾಡಲು ನಾನೇ ಮಾಹಿತಿ ನೀಡಿರುವೆನು. ನಿಪಿ 3 ರ ಅಧಿಕಾರ ಪತ್ರದ ಬಗ್ಗೆ ನಿಪಿ 2 ರ ಠರಾವಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 3 ರ ದಾಖಲಾತಿಯನ್ನು ದೂರುದಾರ ಕಂಪನಿಯ ನಿರ್ದೇಶಕರು ನೀಡಿರುವರು. ದೂರುದಾರ ಕಂಪನಿಯ ಡೈರೆಕ್ಟರ್ ಆಫ್ ಕೇನ್ ರವರಿಗೆ ಅಧಿಕಾರ ಪತ್ರ ಬರೆದುಕೊಡುವ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ರೀತಿಯಾದ ಠರಾವನ್ನು ಪಾಸ್ ಮಾಡದೇ ಅವರು ಈ ಅಧಿಕಾರ ಪತ್ರ ನೀಡಿರುವರು ಎಂದರೆ ಸರಿಯಲ್ಲ. ಖೊಟ್ಟಿಯಾದ ನಿಪಿ 3 ರ ಅಧಿಕಾರ ಪತ್ರದ ಮೇರೆಗೆ ಈ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 4 ರ ಚೆಕ್ ನ್ನು ನಿರಾಣಿ ಶುಗರ್ಸ ಹೆಸರಿನಲ್ಲಿ ನೀಡಿರುವನು. ನಿಪಿ4 ರ ಚೆಕ್ ನಲ್ಲಿ ಮ್ಯಾನೇಜಿಂಗ್ ಡೈರಿಕ್ಟರ್ ನಿರಾಣಿ ಶುಗರ್ಸ ಅಂತ ಬರೆದಿರುವುದಿಲ್ಲ ಎಂದರೆ ಸರಿ. ಈ ಪ್ರಕರಣದ ದೂರಿನ ಶಿರೋನಾಮೆಯಲ್ಲಿ ಮ್ಯಾನೇಜಿಂಗ್ ಡೈರಿಕ್ಟರ್ ನಿರಾಣಿ ಶುಗರ್ಸ ಅಂತ ಕಾಣಿಸಿರುವೆನು ಎಂದರೆ ಸರಿ. ಈ ದೂರಿನ ಶಿರೋನಾಮೆಯಲ್ಲಿ ನಿರಾಣಿ ಶುಗರ್ಸ ಲಿ. ಯುನಿಟ್ -4 ಅಂತ ಕಾಣಿಸಿರುವುದಿಲ್ಲ ಎಂದರೆ ಸರಿ. ನಿಪಿ 4 ರ ಪ್ರಕಾರ ಆರೋಪಿ ಮ್ಯಾನೇಜಿಂಗ್ ಡೈರೆಕ್ಟರ್ ನಿರಾಣಿ ಶುಗರ್ಸ ರವರಿಗೆ ಹಣ ನೀಡುವಂತಹ ಯಾವುದೇ ಪ್ರಸಂಗ ಇರುವುದಿಲ್ಲ ಎಂದರೆ ಸರಿಯಲ್ಲ. ಮ್ಯಾನೇಜಿಂಗ್ ಡೈರೆಕ್ಟರ್ ರವರಿಗೆ ನಿರಾಣಿ ಶುಗರ್ಸ ಹೆಸರಿನಲ್ಲಿ ನೀಡಿರುವ ಚೆಕ್ ನ ಮೇಲೆ ದೂರು ದಾಖಲು ಮಾಡಲು ಯಾವುದೇ ಅಧಿಕಾರವಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ದೂರುದಾರ ಕಂಪನಿಯ ಮಧ್ಯ ಕರಾರು ಆಗಿರುವುದು, ಆದರೆ ಹಾಜರು ಪಡಿಸಿರುವುದಿಲ್ಲ. ಅವಶ್ಯ ಬಿದ್ದರೆ ಅದನ್ನು ಹಾಜರು ಪಡಿಸುತ್ತೇನೆ. ಈ ಕರಾರು ನಮ್ಮ ವಿಭಾಗಕ್ಕೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಈ ದೂರಿನಲ್ಲಿ ಹೇಳಿರುವಂತೆ ಆರೋಪಿಯು ವಾಹನಗಳನ್ನು ಪೂರೈಸುವುದು ಮತ್ತು ಕಬ್ಬನ್ನು ಕಟಾವು ಮಾಡುವ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಕಾರ್ಮಿಕರನ್ನು ಪೂರೈಸುವ ಸಲುವಾಗಿ ಈ

ಕರಾರುವಾಗಿರುವುದು. ಆರೋಪಿ ಮತ್ತು ಕಂಪನಿಯ ಮದ್ಯೆ ಕಬ್ಬು ಕಟಾವು ಮಾಡುವ ಬಗ್ಗೆ ಯಾವುದೇ ಕರಾರುವಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ದೂರಿನಲ್ಲಿ ಬರೆದಿರುವ ಸಂಗತಿಗಳು ನಿಜವಿರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ.

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ